ಅಮೆರಿಕದಲ್ಲಿರುವ ಡಾ. ಮಳಲಿ ಗೌಡರು ಹಾಸನದ ಬಳಿಯ ತಮ್ಮ ಊರಿನ ಬೋಳು ಗುಡ್ಡಕ್ಕೆ ಹಸಿರು ಹಚ್ಚಲು ಹೊರಟಿದ್ದೇ ತಡ ಅದು ಇತರರಿಗೂ ಮಾದರಿಯಾಗುತ್ತಿದೆ. ಕುಣಿಗಲ್ ಮತ್ತು ತಿಪಟೂರಿನ ಯುವಕರಿಗೂ ಇದು ಪ್ರೇರಣೆ ನೀಡಿದೆ.

❀ ಚಿತ್ರ-ಲೇಖನ: ಶ್ರೀ ಪಡ್ರೆ



ಸೀಗೆಗುಡ್ಡಕ್ಕೆ ಹೋಗುವ ಹಾದಿಯಲ್ಲಿ ಸುಂದರ ನೋಟ

# 'ಮಳೆಗುಡ್ಡ'ಕ್ಕೆ ಹಸಿರು ಸೀರೆ

ನೀವು ಹಾಸನ- ಬೇಲೂರು ಹೆದ್ದಾರಿಯಲ್ಲಿ ಸಂಚರಿಸಿದ್ದರೆ ಸೀಗೆಗುಡ್ಡವನ್ನು ಕಂಡಿರುತ್ತೀರಿ. ಗುಡ್ಡದ ಮೇಲಿನ ಮಳೆಮಲ್ಲೇಶ್ವರ ಹಾಸನ ಜಿಲ್ಲೆಗೇ ಮಳೆದೇವರು. ಮಳೆಗಾಲದಲ್ಲಿ ಎರಡು ಮಳೆಗಳ ನಡುವಿನ ಅಂತರ ದೀರ್ಘವಾಯಿತೋ, ಒಣಬೇಸಾಯಕ್ಕೆ ಕುತ್ತು. ಆಗೆಲ್ಲಾ ಈ ರೈತರು ಮಳೆಮಲ್ಲೇಶ್ವರನಿಗೆ ಶರಣು.

ಸೀಗೆಗುಡ್ಡ ಮೋಡ ತಡೆದು ಮಳೆ ಸುರಿಸುತ್ತದೆ ಅಂತ ವಿಶ್ವಾಸ. ಹಾಗಾಗಿ "ಯಾವ ನಾಡು ಕೆಟ್ಟರೂ ಸೀಗೆನಾಡು ಕೆಡದು" ಅಂತಿದ್ದರು ಹಿರಿಯರು. ಈಗ ಸೀಗೆಗುಡ್ಡ ಬೋಳಾಗಿದೆ; ಕಾಡು ಬೋಳಿಸಿದ್ದು ಗ್ರಾಮಸ್ಥರೇ. ಇವರೀಗ "ಮಳೆ ಕಡಮೆಯಾಗಿದೆ" ಅಂತ ಬೇಸರಿಸುತ್ತಾರೆ. ಗಿಡ ನೆಟ್ಟು ಬೆಳೆಸುವ ಅಭ್ಯಾಸ ಇವರಲ್ಲಿಲ್ಲ.

ಅನಿವಾಸಿ ಕನ್ನಡಿಗನ ತಾಯ್ನಾಡ ಸೇವೆ

ಊರ ಒಲವು ಹೇಗೆಯೇ ಇರಲಿ, ಇಲ್ಲಿನ ರೈತ ಕುಟುಂಬವೊಂದು ಸೀಗೆಗುಡ್ಡವನ್ನು ಮತ್ತೆ ಮೈದುಂಬಿಸುವ ಕನಸು ಕಾಣುತ್ತಿದೆ. ಸದ್ದಿಲ್ಲದೆ ಅದಕ್ಕಾಗಿ ಬುನಾದಿ ಹಾಕುತ್ತಲಿದೆ. ಜನಮನ ಒಲಿಸಲು ಕಾರ್ಯಕ್ರಮಗಳು ನಡೆಯುತ್ತಿವೆ. ಈ ಕುಟುಂಬ ಅನುಗನಾಳಿನ ರಂಗೇಗೌಡರದು.

ರಂಗೇಗೌಡರು ಈಗಿಲ್ಲ. ಆದರವರ ಹಸಿರು ಪ್ರೀತಿ, ಸುಸ್ಥಿರ ಚಿಂತನೆ ಉಳಿದಿದೆ. ಹೊಲವೆಂದರೆ ಬದು ಅಗತ್ಯ; ಬದುಗಳಲ್ಲಿ ಮರ ಬೇಕೇ ಬೇಕು. ರಂಗೇಗೌಡರು ರಚಿಸಿದಂತಹ ಬದುವಾಗಲೀ, ಬದುಗಳಲ್ಲಿನ ಹಟ್ಟಿ ಮರಗಳಾಗಲೀ ಇಲ್ಲಿ ಬೇರೆಲ್ಲೂ ಇಲ್ಲ. ಗೌಡರ ಗಂಡು ಮಕ್ಕಳಲ್ಲಿ ಹಿರಿಯರಾದ ಕೆಂಪೇಗೌಡ ಕುಮಾರ್ ಸ್ವತಃ ದುಡಿಯುವ ರೈತರು. ಎರಡನೆಯವರು ಡಾ. ಮಳಲಿ ಗೌಡ ಅಮೆರಿಕದ ಓಹ್ಯೋ ವಿಶ್ವವಿದ್ಯಾಲಯದಲ್ಲಿ ವಿಜ್ಞಾನಿ. ಕಿರಿಮಗ ಕೃಷ್ಣಸ್ವಾಮಿಯವರದು ವ್ಯವಹಾರದ ವೃತ್ತಿ.



'ಬಿಸಿಆರ್‌ಟಿ' ಕ್ರಮದ ಪ್ರತಿಫಲವಾಗಿ ಬೆಳೆದು ನಿಂತ ನಾಲ್ಕು ವರ್ಷ ಪ್ರಾಯದ ಮರ-ಗಿಡಗಳು

'ಕಾಡು ಬೆಳೆಸುವ ಹುಚ್ಚು' ಹುಟ್ಟಿದ್ದು ಅಮೆರಿಕದಲ್ಲಿರುವ ಮಳಲಿ ಗೌಡರಿಂದ. ಈ ವಿಚಿತ್ರ ಗೀಳು ಹತ್ತಿದ್ದು ಹೇಗೆ? ಎಂದು ಕೇಳಿದರೆ "ಗಿಡ ನೆಡಲು, ಗದ್ದೆಗೆ ನೀರುಣಿಸಲು ಅಪ್ಪ ನನ್ನನ್ನು ಜತೆಗೆ ಒಯ್ಯುತ್ತಿದ್ದರು. ಬದುಗಳಲ್ಲಿ ಬೀಜ ಬಿತ್ತಿದ್ದು ನಾನೇ. ಅಪ್ಪನ ಕೃಷಿ ನೋಡಲು ಸುತ್ತಲಿನವರು ಬರುತ್ತಿದ್ದರು. ವಿಜ್ಞಾನ ಕಲಿಯುತ್ತಾ ಹೋದಂತೆ ಅಪ್ಪನ ಕೃಷಿ ಕ್ರಮಗಳು ವೈಜ್ಞಾನಿಕ ಅಂತ ಮನವರಿಕೆಯಾಯಿತು. ನನ್ನಲ್ಲಿ ಸಸ್ಯಪ್ರೇಮ ಬೆಳೆಸುತ್ತಲೇ ಇತ್ತು" ಎಂದು ಮಳಲಿ ನೆನೆಯುತ್ತಾರೆ. "ಗುಜರಾತಿನಲ್ಲಿ ಡಾಕ್ಟರೇಟ್ ಮಾಡುತ್ತಿದ್ದಾಗ ನಮ್ಮ ವಿಭಾಗದ ಸುತ್ತಲೂ ಗಿಡ ನೆಟ್ಟೆ. ಗಿಡಗಳನ್ನು ಸಂರಕ್ಷಿಸಿದರೆ ಅವು ಜೀವವೈವಿಧ್ಯವನ್ನು ಕಾಪಾಡುತ್ತವೆ; ಭೂಮಿಯನ್ನು ತಂಪಾಗಿಡುತ್ತವೆ; ನೀರು ಇಂಗಿಸುತ್ತವೆ; ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆ ವೃದ್ಧಿಸುತ್ತವೆ. ಅವುಗಳ ಕೊಡುಗೆ ಅರ್ಥವಾದಂತೆಲ್ಲಾ ಕಾಡು ಬೆಳೆಸುವ ಹುಚ್ಚು ಹುಟ್ಟುತ್ತದೆ, ಹೆಚ್ಚುತ್ತದೆ". ಎಂದು ತಮ್ಮ ಅನುಭವದ ನುಡಿಗಳನ್ನು ಹೇಳಿದರು.

ಹೈಸ್ಕೂಲ್ ದಿನಗಳ ನೆನಪೂ ಮರೆತಿಲ್ಲ ಅವರು. "ಆಗ ನಮ್ಮಲ್ಲಿಂದ ಸೀಗೆಗುಡ್ಡದವರೆಗಿನ ಮೂರು ಕಿಲೋಮೀಟರ್ ದೂರಕ್ಕೂ ಹಸಿರಿತ್ತು. ಚಿರತೆ, ಹುಲಿ, ನವಿಲು, ಹೆಜ್ಜೇನು, ಕಾಡುಹಂದಿಗಳು ಧಾರಾಳ. ಜನ ಕಾಡು ಕಡಿದು ಹೊಲ ವಿಸ್ತರಿಸತೊಡಗಿದ್ದು ಮುಂದಿನ ದಶಕದಲ್ಲಿ. ಹತ್ತಿರದ ಚಿಕ್ಕ ಗುಡ್ಡಗಳೂ ಬೋಳಾದುವು. ಸೀಗೆಗುಡ್ಡದ ಬಡವಾದ್ದರ ದುಷ್ಪರಿಣಾಮ ಸುತ್ತಲಿನ ನೂರಾರು ಹಳ್ಳಿಗಳ ಮೇಲಾದರೂ ಇದೆ" ಮಳಲಿ ಬೊಟ್ಟುಮಾಡಿ ತೋರಿದರು.



ಹಸಿರವನಕ್ಕೆ ಪ್ರೇರಕ ಶಕ್ತಿ ಮಳಲಿ ಗೌಡ

“ದಕ್ಷಿಣ ಅಮೆರಿಕದ ಮೊಂಟಾನಾ ಕಾಡಿನ ಅಂಕಿ-ಅಂಶಗಳು ಮರಗಳಿಲ್ಲದೆಡೆ ಮೋಡ ಉತ್ಪತ್ತಿ ಕಮ್ಮಿ ಎಂದು ತೋರಿಸಿದೆ. ಇದು ಸೀಗೆಗುಡ್ಡಕ್ಕೂ ಅನ್ವಯ. ಪಶ್ಚಿಮಘಟ್ಟದಿಂದ ಬರುವ ತಂಪುಗಾಳಿಯನ್ನು ಇಲ್ಲಿನ ಸಸ್ಯಗಳು ಮೋಡವಾಗಿಸುತ್ತಿದ್ದಿರಬೇಕು. ಈಗ ಈ ವ್ಯವಸ್ಥೆ ಕೆಟ್ಟಿದೆ. ಇಲ್ಲಿನ ಮಳೆ ನೀರು ಯಗಚಿ ಹೊಳೆ ಮತ್ತು ಹಳೇಬೀಡು ದ್ವಾರ ಸಮುದ್ರ ಕೆರೆ ವರೆಗೂ ಸೇರುತ್ತದೆ. ಪೂರ್ವದಲ್ಲಿ ಬೇಲೂರು, ಪಶ್ಚಿಮದಲ್ಲಿ ಅರಸೀಕೆರೆ ಮತ್ತು ವಾಯುವ್ಯಕ್ಕೆ ಹಾಸನ- ಹೀಗೆ ಸೀಗೆಗುಡ್ಡ ಕಂಗೆಟ್ಟದ್ದರ ಹಾನಿ ಮೂರು ತಾಲ್ಲೂಕುಗಳಿಗೆ ಆಗುತ್ತಿದೆ”.

ಮಳೆಮಲ್ಲೇಶ್ವರ ದೇಗುಲದ ವರೆಗೆ ರಾಜಕಾರಣಿಯೊಬ್ಬರು ನಿರ್ಮಿಸಿದ ಕಡಿದಾದ ರಸ್ತೆ ಪೂರ್ತಿ ಕೆಟ್ಟಿದೆ. ಮಣ್ಣು ಸವಕಳಿ, ಕುಸಿತಕ್ಕೆ ಕಾರಣವಾಗುತ್ತಿದೆ. ಇಲ್ಲಿ ಅರಣ್ಯ ಇಲಾಖೆ ನೆಟ್ಟದ್ದು ನೀಲಗಿರಿ. ಕೆಲವನ್ನಂತೂ ಊರವರು ಕಡಿಕಡಿದು ಮೇಲೇಳದಂತೆ ಮಾಡಿದ್ದಾರೆ.

ಹೊಸ ಅರಣ್ಯೀಕರಣದ ಕೆಲಸ ಸುಲಭವಲ್ಲ. ಪರಿಸರದ ತಿಳುವಳಿಕೆ ಮೂಡಿಸಿ, ಜನರಲ್ಲಿ ಆಸಕ್ತಿ ಕುದುರಿಸಬೇಕು; ಒಂದಷ್ಟು 'ಮಾಡಿ' ತೋರಿಸಬೇಕು. ಇದಕ್ಕಾಗಿ ಮಳಲಿ ಗೌಡರು 2000 ದಲ್ಲಿ ಬಂಧು- ಮಿತ್ರರನ್ನು ಕೂಡಿಸಿ ಒಂದು ಸಂಸ್ಥೆ ಹುಟ್ಟುಹಾಕಿದರು. 'ಜೀವವೈವಿಧ್ಯ ಸಂರಕ್ಷಣಾ ಸಂಶೋಧನಾ ಟ್ರಸ್ಟ್' (ಬಿಸಿಆರ್‌ಟಿ). ಟ್ರಸ್ಟ್‌ಗೆ ಇವರದೇ ದೊಡ್ಡ ಕೊಡುಗೆ- ಒಂದು ಲಕ್ಷ ರೂಪಾಯಿ. ಸ್ಕಾಲರ್‌ಶಿಪ್ ಹಣದಲ್ಲೇ ಕಷ್ಟಪಟ್ಟು ಮಾಡಿದ ಉಳಿತಾಯವಿದು. ಅವರ ಸಹೋದರ ಕೃಷ್ಣಸ್ವಾಮಿ ಈ ಟ್ರಸ್ಟ್‌ನ ಕಾರ್ಯದರ್ಶಿ.

ಮೊತ್ತ ಮೊದಲು, ಊರಿನ 20 ಎಕರೆ ಗೋಮಾಳದ ಅರಣ್ಯೀಕರಣ. ಬೋಳುಬಾಗ, ಮೇಲ್ಮಣ್ಣು ಕಮ್ಮಿ. ತೇಗ, ಸಿಲ್ವರ್ ಓಕ್, ಹೊಂಗೆ, ಕರಿಬೇವು, ಹಲಸು, ಅಕೇಸಿಯಾ ಇತ್ಯಾದಿ ಹತ್ತು ತಳಿಗಳ ಗಿಡ ನಾಟಿ. ಈ ಗಿಡಗಳು ಒಣಗಿಹೋಗುತ್ತವೆ ಎಂದೇ ಎಲ್ಲರೂ ನಂಬಿದ್ದರು. ಬರ ಪರಿಸ್ಥಿತಿ ಇದ್ದರೂ ಹೆಚ್ಚಿನವೂ ಬದುಕಿದವು. ಬಂಡೆ ಕಲ್ಲುಗಳ ನಡುವೆ ಕಾಡು ತಲೆಯೆತ್ತಿತು.

ಬೇಲಿ ಕಟ್ಟಿದ್ದೇ ತಡ, ಕೆಲವು ಸ್ಥಳೀಯ ಗಿಡಗಳೂ ತಲೆಯೆತ್ತಿದುವು. ಕಡಿದುಳಿದಿದ್ದ ಕಾಂಡಗಳು ಚಿಗುರಿದುವು. ಮುತ್ತುಗ, ಶ್ರೀಗಂಧ, ಬಿಲ್ವಾರ, ಹೀಗೆ 150ಕ್ಕೂ ಹೆಚ್ಚು ಜಾತಿಯವು. ಶ್ರೀಗಂಧ ಹುಟ್ಟಿಬೆಳೆಯಲು ಬಿಲ್ವಾರ ಗಿಡ ಸಹಾಯ ಮಾಡುತ್ತದೆ. “ಪ್ರತಿ ವರ್ಷ ನೂರಾರು ಶ್ರೀಗಂಧದ ಗಿಡಗಳು ಮೇಲೇಳುತ್ತಿವೆ” ಎಂದು ಕೃಷ್ಣಸ್ವಾಮಿ ಶ್ರೀಗಂಧದ ಗಿಡವಿದ್ದ ಕಡೆ ಕೈ ತೋರಿದರು. ಈಚೆಗೆ ಇಲ್ಲಿ ನವಿಲು ಕಾಣಿಸಿಕೊಂಡುವು. ಮಳಲಿಯವರಿಗೆ ಇನ್ನೊಂದು ಮಗು ಹುಟ್ಟಿದಷ್ಟೇ ಸಂತಸ. ಅವುಗಳನ್ನು ಚಿತ್ರಿಸಲೆಂದೇ ಡಿಜಿಟಲ್ ಕ್ಯಾಮೆರಾ ಕಳಿಸಿಕೊಟ್ಟರು.



ಗಂಧದ ತೋಪಿನಲ್ಲಿ ವಿವರಣೆ ನೀಡುತ್ತಿರುವ ಕೃಷ್ಣಸ್ವಾಮಿ

“ಹಿಂದೆ ಈ ಜಾಗದಲ್ಲಿ ಗಿಡಮರ ಬಿಡಿ, ಹುಲ್ಲಿನ ಎಳೆಯೂ ಇರಲಿಲ್ಲ” ಅನ್ನುತ್ತಾರೆ ಹಾಸನ ಕೃಷಿ ವಿಜ್ಞಾನ ಕೇಂದ್ರದ (ಕೆವಿಕೆ) ಮುಖ್ಯಸ್ಥ ಹಾಗೂ 'ಬಿಸಿಆರ್‌ಟಿ'ಯ ಗೌರವ ಅಧ್ಯಕ್ಷ ಡಾ. ದೊಡ್ಡಹನುಮಯ್ಯ. “ಒಂದು ಸರಕಾರಿ ಸಂಸ್ಥೆ ಊರವರೊಂದಿಗೆ ಹೇಗೆ ಕೈಜೋಡಿಸಿ ಕೆಲಸಮಾಡಬಹುದು ಅಂತ 'ಕೆವಿಕೆ' ತೋರಿಸಿಕೊಟ್ಟಿದೆ” ಕೆಂಪೇಗೌಡರ ಕುಟುಂಬ ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ.

ನಾಲ್ಕು ವರ್ಷ ಹಿಂದೆ ಸಂಸ್ಥೆಯ ಆವರಣದಲ್ಲಿ ನೆಟ್ಟ ಸಿಲ್ವರ್ ಓಕ್, ತೇಗಗಳ ನೆಡುತೋಪು 20–25 ಅಡಿ ಮೇಲೆದ್ದಿದೆ. ಕಳೆದ ವರ್ಷ ಊರಿನ ಹೊಲದ ಬದುಗಳ ಉದ್ದಕ್ಕೂ 1,500 ಗಿಡ ನಾಟಿ. 'ನಿಮ್ಮವೇ ಗಿಡ; ಜೋಪಾನ ಮಾಡ್ಕೊಳ್ಳಿ' ಅಂತ ಸಲಹೆ ನೀಡಲಾಯಿತು. ರಕ್ಷಣೆ ಸಿಗದಿದ್ದರೂ ಇವರಲ್ಲಿ ಕೆಲವು ಬದುಕುಳಿದುವು. “ಈ ತೋಪು, ಈ ಗಿಡಗಳು ಹಲವರಿಗೆ ಸ್ಫೂರ್ತಿ ಕೊಟ್ಟಿವೆ” ಎನ್ನುತ್ತಾರೆ ಕೃಷ್ಣಸ್ವಾಮಿ. ಅನುಗನಾಳು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೂ ಸಂಸ್ಥೆ ನೆಟ್ಟುಕೊಟ್ಟ ಮರಗಳಿಂದ ಜೀವಕಳೆ ಬಂದಿದೆ. ಈಗಾಗಲೇ ಇಪ್ಪತ್ತು ಶಾಲಾ ಆವರಣಗಳು ಹೀಗೆ ಹಸಿರಾಗಿವೆ.

ವಿದ್ಯಾರ್ಥಿಗಳನ್ನು ಕರೆಸಿ ಮರಗಳ ಮಹತ್ವ ತಿಳಿಸಿ ಅವರಿಂದಲೇ ಗಿಡ ನೆಡಿಸುವುದು ವಿಶೇಷ. ಎರೆಗೊಬ್ಬರ ತಯಾರಿ, ಹಂದಿ ಸಾಕಣೆ, ಕೃಷಿಯ ಜತೆ ಉಪಕಸುಬು, ರೇಶ್ಮೆ ಕೃಷಿ, ನೆಲ- ಜಲ ಸಂರಕ್ಷಣೆ- ಹೀಗೆ ಸಂಸ್ಥೆ ಕೃಷಿಕರಿಗಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಲೇ ಇದೆ. ಹತ್ತಿರದಲ್ಲೇ ಔಷಧವನವೂ ಇದೆ.

ಊರಿಗೆ ಬಂದಾಗ ಮಳಲಿಯವರಿಗೆ ಕಾಲ್ನಡಿಗೆ ಇಷ್ಟ. “ಊರ ಜನರ ಜತೆ ಮಾತುಕತೆ ಸಾಧ್ಯ” ಎನ್ನುತ್ತಾರೆ ಅವರು. ಒಂದು ಸಲ ಊರ ಕೆರೆಯ ಕಡೆಯಿಂದ ಹಕ್ಕಿಗಳ ಚಿಲಿಪಿಲಿ ಕೇಳಿತು. ಅಂದೇ ಊರವರನ್ನು ಮಳಲಿ ಕರೆದರು. “ಈ ಕೆರೆಯನ್ನೇ ಏಕೆ ಅಭಿವೃದ್ಧಿ ಮಾಡಬಾರದು?” ಎಲ್ಲರೂ “ಹೂಂ” ಎಂದರು. ಜಲಾನಯನ ಇಲಾಖೆಯನ್ನು ಸಂಪರ್ಕಿಸಿ ಕೆರೆಯ ಹೂಳೆತ್ತಿಸಿದ್ದಾಯಿತು. ಈಗ ಇಲ್ಲಿಗೆ ನೂರಾರು ಹಕ್ಕಿಗಳು ಬರುತ್ತಿವೆ. ಪಕ್ಷಿಧಾಮವೂ ರೂಪು ಪಡೆದಿದೆ.

ನಾವು ಹೋದಾಗ ಸೀಗೆಗುಡ್ಡದ ದಾರಿಯಲ್ಲೇ ಚಿರತೆ ತಿಂದ, ದನದ ತಲೆಬುರುಡೆಯಿತ್ತು. ರಸ್ತೆಯ ಅಕ್ಕಪಕ್ಕದಲ್ಲಿ ಕೆಲವು ಬೀಟೆ ಮರದ ಗಿಡಗಳೂ ತಲೆ ಎತ್ತಿದ್ದವು. ಜಿಟಿಜಿಟಿ ಮಳೆ. ಹತ್ತಿಯಂತೆ ಮೇಲೇರುತ್ತಿದ್ದ ಮಂಜನ್ನು ಸೀಗೆಗುಡ್ಡದ ನೆತ್ತಿ ತಡೆದಿತ್ತು. ಗುಡ್ಡದ ಮೇಲೆ ದೊಡ್ಡ ಗಾತ್ರದ ಮರಗಳಿರಲಿಲ್ಲ.

ಇಲ್ಲೂ ಮತ್ತಿ, ಹೊನ್ನೆ, ತೇಗ, ಬೀಟೆ, ಶ್ರೀಗಂಧದ ಭಾರೀ ಮರಗಳಿದ್ದುವು. ಜತೆಯಲ್ಲಿದ್ದ ವಿ. ರಾಮೇಗೌಡ ಹೇಳಿದರು: “ಮನೆಮನೆಗಳಲ್ಲಿ ಈಚೆಗೆ ಗೋ ಅನಿಲ ಅಥವಾ ಸಿಲಿಂಡರ್ ಗ್ಯಾಸ್ ಬಂದಿವೆ. ಸೌದೆಗಾಗಿ ಅರಣ್ಯನಾಶ ಕಡಮೆ ಆಗಿದೆ. ಆದರೆ ಪೊದೆಗಳಿಗೆ ಬೆಂಕಿ ಹಾಕುವುದು ಇನ್ನೂ ನಡೆದಿದೆ”.

“ಸೀಗೆಗುಡ್ಡ ಕಳೆಗೆಟ್ಟರೂ, ಮಳೆ-ಮಲ್ಲೇಶ್ವರ ಇನ್ನೂ ತುಂಬಾ ಜನಪ್ರಿಯವಾಗಿದೆ. 15–20 ಕಿಲೋಮೀಟರ್ ಫಾಸಲೆಯವರು, ಬೇಲೂರು-ಹಳೇಬೀಡಿನವರು ಕೂಡಾ ಮಳೆ ಇಲ್ಲದಾಯಿತೆಂದರೆ ಇಲ್ಲಿ ಬಂದು ಪೂಜೆ ಮಾಡುತ್ತಾರೆ” ಎನ್ನುತ್ತಾರೆ ಕೆಂಪೇಗೌಡ. ಪ್ರತಿ ಏಪ್ರಿಲ್‌ನಲ್ಲಿ ಇಲ್ಲಿ ಉತ್ಸವ. 50 ಕ್ವಿಂಟಾಲ್ ಅಕ್ಕಿಯ ಭೋಜನ. ಬರುವ ಹಳ್ಳಿಗರು ಅಂದಾಜು ಅರ್ಧ ಲಕ್ಷ! ಉತ್ಸವ ಸಂದರ್ಭದಲ್ಲಿ ಭಕ್ತರಿಂದ ಗುಡ್ಡದಲ್ಲಿ ಗಿಡ ನೆಡಿಸುವ ಯೋಜನೆ ಇದೆ. ಇದು ಆಚರಣೆಯಾಗಬೇಕಿದೆ.



ಅನುಗನಾಳು ಪ್ರಾಥಮಿಕ ಶಾಲೆಯಲ್ಲಿ ಗಿಡ ನೆಡುವ ಕಾಯಕ

'ಬಿಸಿಆರ್‌ಟಿ' ದೂರದ ಆಸಕ್ತರನ್ನು ಆಕರ್ಷಿಸ ತೊಡಗಿದೆ. ಇಲ್ಲಿನ ಪ್ರೇರಣೆಯಿಂದ ಕುಣಿಗಲ್‌ನ 'ರೇಯ್ಸ್ ಆಫ್ ಹೋಪ್' ಸಂಸ್ಥೆ ಕೂಡ ಪರಿಸರಸ್ನೇಹಿ ಚಟುವಟಿಕೆಗಳನ್ನಾರಂಭಿಸಿದೆ. ಕೇರಳ ಕೃಷಿ ವಿಶ್ವವಿದ್ಯಾಲಯದಿಂದ ಬಂದ ತಂಡ "ನಮ್ಮೂರಲ್ಲೂ ನೀವು ಇಂಥ ಕೆಲಸ ಮಾಡಬಹುದೇ?" ಅಂತ ಕೇಳಿತ್ತು. ಇತ್ತೀಚೆಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧಿಕಾರಿಗಳು ಸಂದರ್ಶಿಸಿದ್ದಾರೆ. ಹಾಸನ ತಾಲ್ಲೂಕಿನ ಜಲಾನಯನ ಅಭಿವೃದ್ಧಿಯ ಕಾರ್ಯವನ್ನು ಇಲಾಖೆ 'ಬಿಸಿಆರ್‌ಟಿ'ಗೆ ವಹಿಸಿದೆ.

ಇತರ ಸ್ವಯಂಸೇವಾ ಸಂಸ್ಥೆಗಳಂತೆ ಈ ಸಂಸ್ಥೆ ಕಟ್ಟಡ, ವಾಹನ, ಉಪಕರಣಗಳಿಗೆ ಹಣ ವ್ಯಯಿಸಿಲ್ಲ. ಅಬ್ಬರದ ಪ್ರಚಾರವಿಲ್ಲ. ಹಾಸನದಲ್ಲೊಂದು ಪುಟ್ಟ ಕಚೇರಿ, ಅನುಗನಾಳಿನಲ್ಲಿ ಅರಣ್ಯ. ಮೂವರು ಪೂರ್ಣಾವಧಿ ಸಿಬ್ಬಂದಿ. ಈವರೆಗಿನ ಚಟುವಟಿಕೆಗಳಿಗೆ ವೆಚ್ಚ 10 ಲಕ್ಷಕ್ಕೂ ಹೆಚ್ಚು. ಇತ್ತೀಚೆಗೆ ತಾಲ್ಲೂಕು ಪಂಚಾಯತ್ ಗಿಡ ನೆಡಲು, ಕೊಡಲೊಪ್ಪಿದ ಮೊತ್ತ ಬಿಟ್ಟರೆ ಸರಕಾರ, ದಾನಿಸಂಸ್ಥೆಗಳಿಂದ ಧನಸಹಾಯ ಪಡೆದಿಲ್ಲ. ತನ್ನ ಸಂಬಳ, ಸ್ನೇಹಿತರ ದೇಣಿಗೆಗಳಿಂದ ಮಳಲಿ ಇವನ್ನೆಲ್ಲಾ ಭರಿಸಿದ್ದಾರೆ. ಸಂಸ್ಥೆಯ ಚಟುವಟಿಕೆಯನ್ನು ಆಧರಿಸಲು ಮಳಲಿ ದಂಪತಿ ಓಹ್ಯಯೋದಲ್ಲಿ ಸರಳ ಜೀವನ ನಡೆಸುತ್ತಿದ್ದಾರೆ ಎನ್ನುತ್ತಾರೆ ಅವರ ಅಲ್ಲಿನ ಮಿತ್ರರು. ಅಣ್ಣ ಕೆಂಪೇಗೌಡರ ಜಮೀನು, ಅಡಿಕಟ್ಟು ಸೌಕರ್ಯ, ಶ್ರಮ ಇತ್ಯಾದಿ ಈ ವೆಚ್ಚದ ಲೆಕ್ಕದಲ್ಲಿ ಸೇರಿಲ್ಲ.

"ನಮ್ಮ ಪುಟ್ಟ ಯತ್ನ ಸಮುದಾಯದಲ್ಲಿ ದೊಡ್ಡ ಬದಲಾವಣೆ ತರಬಲ್ಲುದು ಎನ್ನುವುದು ಈಗ ನಿಚ್ಚಳವಾಗಿದೆ. ಆದರೆ ಸಮಯ ತುಂಬಾ ಬೇಕು" ಮಳಲಿ (ಇ-ಮೇಲ್ ಸಂಪರ್ಕ ಮಾಡಿದಾಗ) ಹೇಳುತ್ತಾರೆ. ನಾಲ್ಕಾರು ವರ್ಷ ಅಥವಾ ಒಂದು ಪುಟ್ಟ ತಂಡದಿಂದ ನನಸಾಗುವಂಥದ್ದಲ್ಲ ಇವರ ಕನಸು. ಅದಕ್ಕಾಗಿ ದೊಡ್ಡ ಆಂದೋಲನವೇ ಬೇಕು. ಈಗ ಹುಟ್ಟಿದ್ದು ಒಂದು ಸಣ್ಣ ಕಿಡಿ.

ಮಳಲಿಯವರ ಅರ್ಧಾಂಗಿ ರೂಪಲಕ್ಷ್ಮಿಯವರನ್ನು ಕೇಳಿದರೆ: "ಊರಿಗೆ ಬಂದಾಗ ತಿಂಗಳ 25 ದಿನವೂ ಇದೇ ಕೆಲಸಕ್ಕೆ ಮೀಸಲು. ಮೊದಮೊದಲು ಕೆಂಪೇಗೌಡರು "ಬೆವರಿನ ಹಣವನ್ನು ಊರ ಉಪಕಾರಕ್ಕೆ ಚೆಲ್ಲಿ ಅಲ್ಲೂ ಇಲ್ಲ, ಇಲ್ಲೂ ಇಲ್ಲ ಅಂತ ಆಗದಿರಲಿ ಅಂತ ಗದರುತ್ತಿದ್ದರು. ಗಿಡಮರ ಮೇಲೇಳುವುದು ಕಂಡ ಅವರ ಮನಸ್ಸು ಈಗ ಮೃದು ಆಗುತ್ತಿದೆ. ನೋಡಿ, ಆದು ಮುಕುರ್ತಿ ಮರ- ದನಗಳ ಕೆಮ್ಮಿಗೆ ಮದ್ದಿಗೆ ಬೇಕು. ತಡಸಲು ಮರದಲ್ಲಿ ದಾಳಿಂಬೆ ಬೀಜ ದಂಥ ಹಣ್ಣಾಗುತ್ತದೆ; ಮಕ್ಕಳಿಗೆ, ಹಕ್ಕಿಗಳಿಗೆ ಕೂಡ ಪ್ರೀತಿ" ಅನ್ನುತ್ತಾರೆ. ನಂತರ ಒಂದು ಪ್ರಶ್ನೆ ಎದುರಿಗೆ ಇಡುತ್ತಾರೆ: "ಈ ಯೋಜನೆ ಯಶಸ್ಸು ಕಂಡೀತೇನು?"

ಯಕ್ಷ ಪ್ರಶ್ನೆಯಿದು. ಈ ವಿಚಾರ ಸುತ್ತಲಿನ ವೀರಾಪುರ, ಕಡದರವಳ್ಳಿ, ಕಲ್ಕೆರೆ, ಬಂಟೇನಳ್ಳಿ, ಸೀಗೆ, ರಾಯಪುರ, ಸಾಣೇನಹಳ್ಳಿ- ಹೀಗೆ ಸೀಗೆಗುಡ್ಡದ ಪಕ್ಕದ ಹತ್ತಾರು ಹಳ್ಳಿಗಳಿಗೆ ಹಬ್ಬಬೇಕು. ಮಳಲಿ ಮತ್ತವರ ಮನೆಯವರ ಈ 'ಹುಚ್ಚು' ಊರಿನ 'ಹುಚ್ಚಾ'ಗಿ ಕಾಡಬೇಕು.



'ಬಿಸಿಆರ್‌ಟಿ'ಯಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ಪಾಠ

ಅದಕ್ಕೆ ಅದರದ್ದೇ ಆದ ಸಹಿ ಸಮಯ, ತಾಳ್ಮೆ, ನಿರಂತರ ಶ್ರಮ, ಹೆಚ್ಚಿನ ಹೆಗಲುಗಳು ಬೇಕಾದೀತು.

ಸ್ವಪ್ರೇರಣೆಯಿಂದ ದಿಟ್ಟ ಹೆಜ್ಜೆ ಇಟ್ಟ ಈ ಬಡ ಕುಟುಂಬದ ಸಂಕಲ್ಪ ದಿನೇದಿನೇ ಬಲಿಯುತ್ತಿದೆ. "ಓಹ್ಯಯೋದಲ್ಲಿರುವುದು ಮಳಲಿಯ ದೇಹ ಮಾತ್ರ. ಮನ ಪೂರ್ತಿ ಮಳೆಗುಡ್ಡದಲ್ಲಿ" ಎಂದು ದೂರುತ್ತಾರೆ ಮಳಲಿಯವರ ಅಮ್ಮ ಲಕ್ಷ್ಮಿಯಮ್ಮ. "ಫೋನ್ ಮಾಡಿದಾಗಲೂ ನಮ್ಮೆಲ್ಲರ ಸುಖ ದುಃಖ ವಿಚಾರಿಸುವುದಿಲ್ಲ ಅವನು. ಮರ ಹೇಗೆ ಬೆಳೆದಿದೆ, ಮತ್ತೆಷ್ಟು ನೆಟ್ಟಿರಾ ಅನ್ನೋ ಪ್ರಶ್ನೆ ಮಾತ್ರ".

"ಈ ಆಸಾಮಿ ಮದುವೆಯಾದ ದಿನ ಅದೇ ದಿರಿಸಿನಲ್ಲಿ ಹೆಂಡತಿಯೊಂದಿಗೆ ಗುಡ್ಡದಲ್ಲಿ ಒಂದೊಂದು ಗಿಡ ನೆಟ್ಟ ಮೇಲೆಯೇ ಇಲ್ಲಿ ಬಂದದ್ದು" ಎಂದು ಸಹೋದರ ಕೃಷ್ಣಸ್ವಾಮಿ ನೆನಪಿಸಿಕೊಳ್ಳುತ್ತಾರೆ.

ವಿದೇಶಕ್ಕೆ ಹೋಗಿ ಬದುಕಿನೇಣಿ ಏರಿದ ಮೇಲೆ ಅಲ್ಲೇ ಉಳಿಯಬಯಸುವವರು, ತಾಯ್ನಾಡಿಗೆ ಮುಖ ಮಾತ್ರ ತೋರುವವರು ಹೆಚ್ಚು. ಈ ತರುಣ ಹಾಗಲ್ಲ. ಸುಖ- ಸಂಪತ್ತುಗಳ ಬಾಗಿಲು ತೆರೆದಿದ್ದರೂ ಬೇಡ. ಊರಮಂದಿಗೆ ಬೇಕು ಅನ್ನಿಸದಿದ್ದರೂ, ಮಳೆಗುಡ್ಡಕ್ಕೆ ಮರುಜೀವ ಕೊಡುವುದೇ ಬದುಕಿನ ಧ್ಯೇಯ. ಸಾವಿರಕ್ಕೊಬ್ಬ ಸಿಗುವುದು ಕಷ್ಟ ಇಂಥವರು.

ಸೀಗೆಗುಡ್ಡ ಮರುಜೀವ ಪಡೆದರೆ ಅದು ಮಳಲಿ ಕುಟುಂಬದ ಮಾತ್ರವಲ್ಲ, ನೂರಾರು ಹಳ್ಳಿಗಳ ಗೆಲುವು. ಸ್ವಾತಂತ್ರ್ಯ ಬಂದ ಲಾಗಾಯ್ತು ಕಾಡುಮೇಡುಗಳನ್ನು ಧ್ವಂಸ ಮಾಡುತ್ತಲೇ ಬಂದ ಸಮಾಜಕ್ಕೆ ಇದೊಂದು ಮಾದರಿಯ ಪಾಠವಾಗುತ್ತದೆ. ಇಲ್ಲಿನದು ದೇಶದಲ್ಲೇ ಒಂದು ಅದ್ವಿತೀಯ ಹಸಿರು ಅಧ್ಯಾಯವೆನಿಸುತ್ತದೆ.

■

## ತಿಪಟೂರಲ್ಲಿ ಚಿಗುರತೊಡಗಿದ ಅನುಗನಾಳಿನ ಕುಡಿ

"ಸೀಗೆಗುಡ್ಡವನ್ನು 'ಹೆರಿಟೇಜ್ ಸ್ಪಾಟ್' ಆಗಿ ಅಭಿವೃದ್ಧಿಗೊಳಿಸುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ" ಎನ್ನುತ್ತಾರೆ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎಚ್. ನಾಗರಾಜ್. ಅವರು 'ಬೀಸೀಆರ್ಟಿ'ಯಿಂದ ಎಷ್ಟು ಪ್ರಭಾವಿತರಾಗಿದ್ದಾರೆಂದರೆ, ಹುಟ್ಟೂರು ತಿಪಟೂರಿನಲ್ಲಿ 'ಕಲ್ಪತರು ಪರಿಸರ ಸಂರಕ್ಷಣಾ ಕೇಂದ್ರ' ಹುಟ್ಟುಹಾಕಿದ್ದಾರೆ. ಕೇಂದ್ರದ ನೇತೃತ್ವದಲ್ಲಿ ಬಿಳಿಗೆರೆಪಾಳ್ಯ ಗೋಕಟ್ಟೆಗೆ ಹೇಮಾವತಿಯಿಂದ ನೀರು ತರುವ ಏರ್ಪಾಡು. ಒಂದು ಕಿಲೋಮೀಟರಿಗೂ ದೂರ ಒಂದಡಿಯ ಸಿಮೆಂಟ್ ಕೊಳವೆ ಸ್ಥಾಪನೆ. ಈ ಕೆಲಸ ಡಿಸೆಂಬರಿನೊಳಗೆ ಮುಗಿದರೆ ಮಾತ್ರ ಗೋಕಟ್ಟೆಯ ಒಡಲು ತುಂಬೀತು. ಒಟ್ಟು ವೆಚ್ಚ ಒಂದೂವರೆ ಲಕ್ಷ ರೂಪಾಯಿ. ಇದಕ್ಕಾಗಿ ಊರವರಿಂದ ಧನಸಂಗ್ರಹ ಆರಂಭವಾಗಿದೆ.

ಇಪ್ಪತ್ತೈದು ವರ್ಷದಿಂದ ಒಮ್ಮೆಯೂ ತುಂಬದ ಗೋಕಟ್ಟೆ ಈ ವರ್ಷ ತುಂಬಲಿದೆ. ಸುತ್ತಲಿನ 50 ಕೃಷಿ ಕುಟುಂಬ ಮತ್ತು ನೂರಾರು ಕೊಳವೆಬಾವಿಗಳಿಗೆ ಪ್ರಯೋಜನವಾಗಲಿದೆ. ಮಳಲಿ ಗೌಡರು ಸ್ಟೇಟ್ಸ್‌ನಲ್ಲಿದ್ದು ಅಷ್ಟು ಮಾಡಲು ಸಾಧ್ಯವಾಗಿದ್ದರೆ, ಊರಲ್ಲಿರುವ ನಾವು ಇಷ್ಟಾದರೂ ಮಾಡಬೇಡವೇ?' ಕೇಳುತ್ತಾರೆ, ನಾಗರಾಜ್.



ಸ್ವಾಭಾವಿಕ ಕಾಡಿಗಿಂತ ಹಲುಸಾಗಿ ಬೆಳೆದ ನೆಡುತೋಪು

**ಸಂಪರ್ಕ:** ಬಯೋಡೈವರ್ಸಿಟಿ ಕನ್ಸರ್‌ವೇಶನ್ ರೀಸರ್ಚ್ ಟ್ರಸ್ಟ್ ('ಬೀಸೀಆರ್‌ಟಿ'), ಅರಣ್ಯ ಕಚೇರಿಯ ಎದುರು, ಮೊದಲ ಮಹಡಿ, ಎಂ.ಜಿ. ಬೇಕರಿ ಸಂಕೀರ್ಣ, ಆರ್.ಸಿ. ರಸ್ತೆ, ಹಾಸನ. ದೂರವಾಣಿ : (08172) 592 494.

**mailto:** info@bcrt.org ಅಥವಾ **mailto:** gowda.5@osu.edu

**website:** www.bcrt.org